ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 56-59
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವೈದೇಹಿ ಮತ್ತು ವೀಣಾ ಶಾಂತೇಶ್ವರ ಅವರ ಕಥೆಗಳ ಅವಲೋಕನ

**ಡಾ.ಅನುಪಮಾ ವೆಂ.ಆದಾಪೂರ**

ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುಂಡಗೋಡ.

***Abstract:***

*ವೈದೇಹಿ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ 'ಜಾನಕಿ ಶ್ರೀನಿವಾಸಮೂರ್ತಿ'ಯವರು ಕನ್ನಡದ ಪ್ರಮುಖ ಲೇಖಕಿಯರಲ್ಲೊಬ್ಬರು. ಸಣ್ಣಕಥೆ, ಕಾವ್ಯ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ ಸಾಹಿತ್ಯ, ಪ್ರಬಂಧ ಮುಂತಾದವುಗಳಲ್ಲಿ ತೊಡಗಿಕೊಂಡಿದ್ದಾರೆ. ಅದೇ ರೀತಿ ಡಾ. ವೀಣಾ ಶಾಂತೇಶ್ವರ ಅವರೂ ಕೂಡ ಕನ್ನಡದ ಪ್ರಮುಖ ಲೇಖಕಿಯರಲ್ಲೊಬ್ಬರು. ಧಾರವಾಡದ ಕರ್ನಾಟಕ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದಾರೆ.; ವೀಣಾ ಶಾಂತೇಶ್ವರ ಅವರು; ಸಣ್ಣಕತೆ, ಕಾದಂಬರಿಗಳ ಜೊತೆಗೆ ಹಲವಾರು ವಿಮರ್ಶಾತ್ಮಕ ಪ್ರಬಂಧಸಂಗ್ರಹಗಳನ್ನು, ಪ್ರಕಟಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ವೈದೇಹಿ ಅವರ ಶಕುತಲೆಯೊಂದಿಗೆ ಕಳೆದ ಅಪರಾಹ್ನ ಹಾಗೂ ವೀಣಾ ಶಾಂತೇಶ್ವರ ಅವರ ನಿರಾಕರಣೆ ಕಥೆಗಳನ್ನು ಅವಲೋಕಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಕನ್ನಡ ಕಥೆಗಳು, ವೈದೇಹಿ, ವೀಣಾ ಶಾಂತೇಶ್ವರ, 'ಶಕುಂತಲೆಯೊಡನೆ ಕಳೆದ ಅಪರಾಹ್ನ, ನಿರಾಕರಣೆ.*

**ಪೀಠಿಕೆ**

ವೈದೇಹಿ ಅವರ 'ಶಕುಂತಲೆಯೊಡನೆ ಕಳೆದ ಅಪರಾಹ್ನ' ಕತೆಯಲ್ಲಿ ಜೀವ ತಳೆದ ಆಧುನಿಕ ಮನೋಭಾವದ ಶಕುಂತಲೆ, ಕಥೆಯಲ್ಲಿ ಶಕುಂತಲೆ ಹೆಣ್ಣಿನ ಅಂತರಂಗವನ್ನು ಬಿಚ್ಚಿಡುತ್ತಿದ್ದಾಳೆ. ಶಕುಂತಲೆಯನ್ನು ಸ್ತ್ರೀಯ ನಾನಾ ಆಯಾಮಗಳಲ್ಲಿ ಸಮಾಜಮುಖಿಯಾಗಿಸುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ಕಾಳಿದಾಸನ ಕಾವ್ಯದ ನಾಯಕಿ ಶಕುಂತಲೆಯು ಒಬ್ಬ ಪ್ರಣಯೋನ್ಮಾದಿನಿಯಾಗಿ, ವಿರಹಿಣಿಯಾಗಿ ನೂರಾರು ಭಾವಗಳ ರಾಗರಂಜಿತವಾದ ಕಾವ್ಯವಾಹಿನಿಗೆ ಮೂಲಸೂತ್ರವಾದವಳು. ಅವಳನ್ನು ಸ್ತ್ರೀಪರವಾಗಿ ಗ್ರಹಿಸಿದಾಗ ಅವಳ ಗಾಯಗೊಂಡ ಹೆಣ್ತನದ ನೋವು ಬಿಚ್ಚಿಕೊಳ್ಳುತ್ತವೆ. ಏಕಕಾಲಕ್ಕೆಯೇ ನೋವಿಗೆ ಕಾರಣೀಭೂತವಾದ ಪುರುಷ ವ್ಯಕ್ತಿತ್ವದ ಅಕ್ಷಮ್ಯ ದೋಷಗಳು ತೆರೆದುಕೊಳ್ಳುತ್ತವೆ. ಇಂತಹ ಪ್ರಯತ್ನಗಳನ್ನು ವೀಣಾ ಶಾಂತೇಶ್ವರರು 'ನಿರಾಕರಣೆ' ಯಲ್ಲಿ ವೈದೇಹಿಯವರು 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ ಕಥೆಯಲ್ಲಿ ಕೈಗೊಂಡಿದ್ದಾರೆ.

**ಶಕುಂತಲೆಯೊಂದಿಗೆ ಕಳೆದ ಅಪರಾಹ್ನ**

ವೈದೇಹಿಯವರ ಶಕುಂತಲೆ ತನ್ನೊಳಗೆ ಬಂಡಾಯ ಮನೋಭಾವವನ್ನು ಒಳಗೊಂಡವ ಳಾದರೂ ಆಕೆಗೆ ಪ್ರತಿಭಟನೆಗಿಂತ ತನ್ನನ್ನು ತಾನು ಕಟ್ಟಿಕೊಳ್ಳುವಲ್ಲಿ ಆಸಕ್ತಿ. ತನ್ನ ಶೋಷಿತ ಸ್ಥಿತಿಗಾಗಿ ತಳಮಳಿಸುವುದಕ್ಕಿಂತ ತಣ್ಣಗೆ ಕುಳಿತು ತನ್ನ ಅನುಭವಗಳನ್ನು ಶೋಧಿಸುವಲ್ಲಿ, ವಿಶ್ಲೇಷಿಸುವಲ್ಲಿ ಆಕೆ ಮಗ್ನಳು. ವೈದೇಹಿಯವರು ಪುರಾಣಲೋಕದ

***Please cite this article as:*** ಅನುಪಮಾ ವೆಂ.ಆದಾಪೂರ. (2023). ವೈದೇಹಿ ಮತ್ತು ವೀಣಾ ಶಾಂತೇಶ್ವರ ಅವರ ಕಥೆಗಳ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 56–59.

ಶಕುಂತಲೆಯನ್ನು ಒಂದಿಷ್ಟು ಸ್ತ್ರೀವಾದ ಚಿಂತನೆಗಳ ನೆಲೆಯಲ್ಲಿ ಗ್ರಹಿಸಿ ಶಕುಂತಲೆಯ ಅತೀಶಯವಾದ ನೋವಿನಲ್ಲಿ ನೊಂದ ಬೆಂದ ಪೌರಾಣಿಕ ಅಸ್ತಿತ್ವವನ್ನು ನವೀಕರಿಸಿದ್ದಾರೆ. ಶಕುಂತಲೆ ಇಲ್ಲಿ ಪ್ರತಿ ಹಂತದಲ್ಲೂ ಮಾಗುತ್ತ, ಭ್ರಮೆಗಳನ್ನು ಕಳಚಿಕೊಳ್ಳುತ್ತ, ನಿಚ್ಚಳವಾಗಿ ಯೋಚಿಸುವ, ಪ್ರತಿಭಟಿಸುವ, ವಿಶಿಷ್ಟ ಬದುಕನ್ನು ಕಟ್ಟಿಕೊಳ್ಳುವ ಅನೇಕ ಪೌರಾಣಿಕ ಸಂಗತಿಗಳನ್ನು ಮುರಿದು, ತನ್ನ ಇದುವರೆಗಿನ ಅಸ್ತಿತ್ವದ ಹೋರಾಟಕ್ಕೆ ತೆರೆ ಎಳೆದು ಶಕುಂತಲೆ ಜೀವದಳೆದಿದ್ದಾಳೆ.

ಬದುಕಿನ ಮುಸ್ಸಂಜೆಯಲ್ಲಿ ಹೇಮಕೂಟದ ಮಣ್ಣು ಜಗಲಿಯ ಮೇಲೆ ಕುಳಿತ ಶಕುಂತಲೆ ಗತವನ್ನು ಕೆದಕುತ್ತಾಳೆ. ಆಗ ಹಿಂದೊಮ್ಮೆ ನಡೆದು ಹೋದ ಯೌವ್ವನದ ಆವೇಗಗಳು ಸಹಜವಾಗಿ ಬಿಚ್ಚಿಕೊಳ್ಳುತ್ತವೆ. ಭ್ರಮೆಗಳೇ ಇಷ್ಟವಾಗಿದ್ದ ವಯಸ್ಸಿನಲ್ಲಿ ಅವನಿಗಾಗೇ ಹುಟ್ಟಿಬಂದವಳು ತಾನು ಎಂಬ ಭ್ರಮೆಯಲ್ಲಿ ತೇಲಿಹೋಗಿದ್ದನ್ನು ನೆನಪಿಸಿಕೊಳ್ಳುತ್ತಾಳೆ. ನಂತರದ ಘಟನೆಯಲ್ಲಾದ ಪ್ರಮಾದವೆಲ್ಲ ದುಷ್ಯಂತನದೆಂದು ಅಂದು ಅವನು ತನಗೆ ಬೇಕಾಗಿದ್ದ ಎಂಬ ಅರಿವು ಸ್ಪಷ್ಟವಾಗುತ್ತದೆ. ಆಶ್ರಮದ ಗಿಡದಲ್ಲಿ ಹೂ ಬಿಟ್ಟಂತೆ, ಋತಮಾನದಲ್ಲಿ ಕರೆವ ಹಕ್ಕಿಯಂತೆ, ಯಾವ ನಿರೀಕ್ಷೆಗಳ ಭಾರವಿಲ್ಲದೇ ಸಹಜವಾಗಿ, ನಿರ್ಮಲವಾಗಿ, ತೀಕ್ಷ್ಣವಾಗಿ ದುಷ್ಯಂತನನ್ನು ಪ್ರೀತಿಸುತ್ತಾಳೆ.

ಪ್ರೇಮಾತಿಶಯದ ಪರಾಕಾಷ್ಠೆಯನ್ನು ಅನುಭವಿಸಿದ ಶಕುಂತಲೆಗೆ ಆ ಕ್ಷಣದ ಸತ್ಯಗಳು ಮಾತ್ರ ಮುಖ್ಯವೆನಿಸುತ್ತವೆ. ಇದು ಪಾಪವಲ್ಲ ಎಂದ ದುಷ್ಯಂತನ ಮಾತಿಗೆ ಆಕೆ ಕರಗಿದಳು, ಕೊಟ್ಟಳು, ಪಡೆದಳು. ಆ ಉತ್ಕಟ ಪ್ರಣಯಾನುಭವದ ಸವಿಯಲ್ಲೂ ಕಿರುಕಹಿ ಸೇರಿತ್ತೇ? ಎಂದು ವರ್ತಮಾನದ ಅರಿವಿನಲ್ಲಿ ಆಕೆ ಯೋಚಿಸುತ್ತಾಳೆ. ಪ್ರೇಮದ ಅಮಲಿನಲ್ಲಿ ಮತ್ತಳಾಗಿದ್ದ ಶಕಂತಲೆಗೆ ದುಷ್ಯಂತನೊಳಗಿನ ದ್ವಂದ್ವಗಳು ಕಾಣಲಿಲ್ಲ ಅದು ಬೇಕಿರಲೂ ಇಲ್ಲ. ಪ್ರೇಮವೊಂದೇ ಅವಳ ಸತ್ಯವಾಗಿತ್ತು. ಆದರೆ ಮನುಷ್ಯನ ಬದುಕು ಬರಿಯ ಭಾವನೆಗಳಿಂದ ಕಟ್ಟಿದ್ದಲ್ಲ. ಅದು ಪ್ರಕೃತಿಯಂತೆ ಸಹಜವೂ ಅಲ್ಲ. ನೂರಾರು ಮೌಲ್ಯಗಳು, ಕಟ್ಟಳೆಗಳು, ಬೆಳೆಯುತ್ತ ಹೋದಂತೆ, ವ್ಯವಸ್ಥೆಯ ಹಿಡಿತ ಬಿಗಿಯಾದಂತೆ ಸಹಜ ಭಾವನೆಗಳೇ ಅಸಹಜವಾಗಿ ಕಾಣತೊಡಗುತ್ತವೆ.

ಶಕುಂತಲೆಯ ಭಾವನೆಗಳ ಉತ್ಕಟತೆಯೆದುರು ದುಷ್ಯಂತನ ಭಾವನೆಗಳನ್ನಿಟ್ಟು ನೋಡಿದಾಗ ಅವು ತೀರ ವ್ಯವಹಾರಿಕವಾಗಿ ಕಾಣಿಸುತ್ತದೆ. ಉತ್ಕಟತೆ ಅವನ ಜಾಯಮಾನವೇ ಅಲ್ಲ. ಅವನ ಅಂತಃಪುರದ ಹೆಂಗಸರ ಪಟ್ಟಿಯಲ್ಲಿ ಇಂಥ ಶಕುಂತಲೆಯರು ಎಷ್ಟೋ ಜನ ಆದರೂ ಆತ 'ಕುಲ ಪ್ರತಿಷ್ಠೆಗೆ ಕಾರಣಳಾಗುವ ಈ ಶಕುಂತಲೆ ಮತ್ತು ಸಮುದ್ರವೇ ಒಡ್ಯಾಣವಾಗಿರುವ ವಸುಂಧರೆ ಇವರನ್ನು ಬಿಟ್ಟರೆ ಎನಗೆ ಪ್ರಿಯಕರವಾದದ್ದಿಲ್ಲ" ಎನ್ನಬಲ್ಲ ಜಾಣ; ಪಳಗಿದ ಪ್ರಣಯಿ. ಅಂದೊಮ್ಮೆ ಹೊರಟು ಹೋದ ದುಷ್ಯಂತ ಶಕುಂತಲೆಯನ್ನು ಬೇಕಂತಲೇ ಮರೆತ. ಮೋಸವಲ್ಲದೆ ಇದು ಮತ್ತೇನು? "ಕವಿ ಶಾಪಗೀಪ ಇತ್ಯಾದಿಗಳನ್ನೆಲ್ಲ ಅಡ್ಡ ಇಟ್ಟು ಪುರುಷರ ಲಂಪಟತ್ವ ಮುಚ್ಚಿಡಲು ಹವಣಿಸಿದವೆಲ್ಲ ಜಾಣ ಮರೆವಿನ ಮಲ್ಲರನ್ನು ತನ್ನ ತೆಕ್ಕೆಯೊಳಗೆ ಸುರಕ್ಷಿತವಾಗಿರಿಸುವ ಪುರುಷ ಕಟ್ಟಿದ ವಿಸ್ಮರಣೆಯ ಕತೆ. ಲೇಖಕಿಯ ಪ್ರತಿಕ್ರಿಯೆ ಅದಕ್ಕೆ ಶಾಪದ ನೆಪವೊಡಿ ಹೆಣ್ಣಿಗೆ ವಾಸ್ತವವನ್ನು ಮರೆಮಾಚುವ ಪುರುಷ ಜಗತ್ತಿನ ಬಗ್ಗೆ ವ್ಯಂಗ್ಯಭರಿತ ತಿರಸ್ಕಾರ.

ದೂರ್ವಾಸ ಶಕುಂತಲೆಯರ ಸಂಬಂಧವನ್ನು ಇಲ್ಲಿ ಪುರಾಣಕ್ಕಿಂತ ಭಿನ್ನವಾಗಿ ನೋಡಲಾಗಿದೆ. ಬಾಲ್ಯದಿಂದಲೂ ಶಕುಂತಲೆಯನ್ನು ಬಲ್ಲ ದುರ್ವಾಸರಿಗೆ ಆಕೆಯ ಬಗೆಗೆ ಅಪಾರವಾದ ವಾತ್ಸಲ್ಯ ಒಡಲಲ್ಲಿ ಪ್ರೇಮದ ಫಲ ಹೊತ್ತು ದುಷ್ಯಂತನನ್ನು ನೆನೆದು ಪರಿತಪಿಸುತ್ತಿರುವ ಶಕುಂತಲೆಯ ಹೆಪ್ಪುಗಟ್ಟಿದ ವಿರಹ ವೇದನೆ ಅವರಿಗೆ ನಿಚ್ಚಳವಾಗಿ ಕಾಣಿಸುತ್ತದೆ. ದುಷ್ಯಂತನನ್ನು ಜಾಣ ಮರೆವಿನ ಮಲ್ಲನೆಂದು ಟೀಕಿಸುವ ದುರ್ವಾಸರು ದುಷ್ಯಂತನ ಬಗ್ಗೆ ಕೋಪ ತಾಳುತ್ತಾರೆ. ಇದನ್ನೆಲ್ಲಾ ದೂರದಿಂದಲೇ ಗಮನಿಸಿದ

ಆಶ್ರಮವಾಸಿಗಳು ತಮ್ಮ ಕಲ್ಪನೆಯಲ್ಲೆ ಶಾಪದ ಕಥೆ ಕಟ್ಟುತ್ತಾರೆ. ಇಲ್ಲಿ ಪುರಾಣ ಭಂಜನೇಯ ಮೂಲಕ ವೈದೇಹಿಯವರು ಪುರುಷನನ್ನು ಪುರುಷನೇ ಟೀಕಿಸುವ ತಂತ್ರ ವಿಶಿಷ್ಟವಾಗಿದೆ. ಪುರುಷರ ತಪ್ಪುಗಳಿಗೆಲ್ಲ ತಮ್ಮದೇ ಕಾಲ್ಪನಿಕ ಕಾರಣಗಳ ಕವಚ ಅದನ್ನು ಒಪ್ಪಾಗಿಸಿದ ಮೋಸವನ್ನು ವೈದೇಹಿಯವರು ಪ್ರತಿಭಟಿಸುತ್ತಾರೆ. ಶಾಪದ ನೆಪವಿದ್ದಾಗ, ಸಹಜವಾಗಿ ಕಾಣುವ ದುಷ್ಯಂತನ ವರ್ತನೆ ಆ ನೆಪವಿಲ್ಲದಾಗ ಅಮಾನುಷವಾಗಿ ತೋರುತ್ತದೆ. ಇಂತ ಮಿಥ್ ಅನ್ನು ಮುರಿದು ಸ್ತ್ರೀ ಪರವಾಗಿ ಕಾಣುವ ಕಟ್ಟುವ ಸಾಧ್ಯತೆಗಳತ್ತ ಲೇಖಕಿ ಬೆರಳು ಮಾಡುತ್ತಾರೆ. ಇಲ್ಲಿ ವೈದೇಹಿ ಅವರು ಪುರುಷ ಕೃತ ಕಾವ್ಯದ ಕಲ್ಪನೆಯನ್ನು ಪ್ರಶ್ನಿಸಿ ತರಾಟೆಗೆ ತೆಗೆದುಕೊಳ್ಳುತ್ತಾರೆ. ಕಾವ್ಯಕ್ಕೆ ಸೌಂದರ್ಯಾನುಭೂತಿಬೇಕು, ರಸಾನುಭೂತಿಬೇಕು. ಆದರೆ ವಾಸ್ತವದ ಕಹಿ ಬೇಡ ಎನ್ನುವ ಪುರುಷ ನಿಲುವನ್ನು ಧಿಕ್ಕರಿಸುತ್ತಾರೆ. ಇಲ್ಲಿ ಪರೋಕ್ಷವಾಗಿ ಕಾವ್ಯ ಮೀಮಾಂಸೆಯ ಧೋರಣೆ ದೃಷ್ಟಿಯನ್ನು ಪ್ರಶ್ನಿಸುವ ದಾಟಿಯನ್ನು ಕಾಣಬಹುದು. ಪತ್ನಿಯಾಗಿ ಪತಿಯಿಂದ ತಿರಸ್ಕೃತಳಾದ ಶಕುಂತಲೆ ಸ್ವತಃ ಬೆಂಕಿಯಾಗುತ್ತಾಳೆ. ಧಗಧಗ ಉರಿಜ್ವಾಲೆಗಳನ್ನು ಚಾಚಿ ಅವನನ್ನು ದಹಿಸಿ ಬಿಡುವ ಏಕಮೇವ ಆಕಾಂಕ್ಷೆ ನನ್ನನ್ನು ಮುತ್ತಿಕೊಂಡು ಬಿಟ್ಟಿತ್ತು. ಕೂಗಬೇಕು, ಬೊಬ್ಬಿಡಬೇಕು, ಮೂರೂ ಲೋಕಕ್ಕೂ ಕೇಳುವಂತೆ ಒತ್ತಿಕೊಂಡ ವಿರಹ ಶೋಕವನ್ನೆಲ್ಲಾ ಅಗ್ನಿಗೆ ಎರಚಿ ಬ್ರಹ್ಮಾಂಡವನ್ನೇ ಸುಟ್ಟು ಬಿಡಬೇಕು. ಮನುಜ ಕುಲವೇ ಇನ್ನು ಚಿಗುರದಂತೆ ಎಂದು ಶಕುಂತಲೆ ನಿರ್ಧರಿಸಿ ಹೆಣ್ಣು ತಿರುಗಿ ಬಿದ್ದರೆ ವಿನಾಶವನ್ನೇ ಮಾಡಬಲ್ಲಳು ಎಂಬ ಎಚ್ಚರ ಇಲ್ಲಿ ಕಾಣಿಸುತ್ತದೆ.

ದುಶ್ಯಂತ ಮತ್ತೆ ಬಂದು 'ಬಾ; ಎಂದು ಕರೆದಾಗ ಶಕುಂತಲೆ ಹೋಗಲೊಪ್ಪುವುದಿಲ್ಲ. ಪರಸ್ಪರ ಅನಿವಾರ್ಯವಾಗುವವರೆಗೆ ಸೇರುವುದು ತಪ್ಪೆಂದು ಆಕೆಗೆ ಅನಿಸುತ್ತದೆ. ಅದರ ಬೆನ್ನಲ್ಲೆ ಯಾರಿಗೆ ಯಾರೂ ಅನಿವಾರ್ಯವಲ್ಲ ಎಂಬ ಸತ್ಯವು ಆತನಿಗೆ ಇರುವುದು ತನ್ನ ಉತ್ತರಾಧಿಕಾರಿಯ ಚಿಂತೆ ಎಂದು ಅರಿವಾದಾಗ ಭರತನನ್ನು ಅವನೊಡನೆ ಕಳಿಸುತ್ತಾಳೆ. ಒಂದು ಸಲ ತಾಯಿಯ ಮನ ಭಾರವಾದರೂ ಮರುಕ್ಷಣ ಆತ ತನ್ನ ನೆಲೆಯ ಸೇರಿದ ತಾಯ್ತನದ ಹಂಗು ಆಕೆಗೆ ಉಳಿಯುವುದಿಲ್ಲ. ರಾಜನ ಕಿರೀಟ ಶಕುಂತಲೆಯ ಪಾಲಿಗೆ ಮುಖವಾಡ ತೊಟ್ಟ ದುಶ್ಯಂತ ಅಪ್ಪಟ ಮನುಷ್ಯನಾಗಿ ಉಳಿಯಲಿಲ್ಲ.

ಹೀಗೆ ಚರಿತ್ರೆಯುದ್ದಕ್ಕೂ ಹೆಣ್ಣಿನ ಒಳಲೋಕವನ್ನು ಅದೃಶ್ಯವಾಗಿಸಿ ಅವಳನ್ನು ಬರಿಯ ಶೃಂಗಾರದ ಬೊಂಬೆಯೆಂದು ಚಿತ್ರಿಸಿದ ರಮ್ಯ ಕಾವ್ಯ ಪ್ರಪಂಚದ ಏಕಮುಖತೆಯನ್ನು ವೈದೇಹಿ ಶಕುಂತಲೆಯ ಮೂಲಕ ಗುರುತಿಸುತ್ತಾರೆ. ಪುರುಷನ ದೃಷ್ಟಿಯಿಂದಲೇ ಹೆಣ್ಣನ್ನು ಕಾಣುತ್ತಾ ಅದೇ ಸತ್ಯವೆಂದು ನಂಬಿಸುವ ಸಾಂಸ್ಕೃತಿಕ ಲೋಕದ ಪುರುಷ ಯಜಮಾನ್ಯವನ್ನು ಸೂಕ್ಷ್ಮವಾಗಿ ಶಕುಂತಲೆಯ ಹೃದಯವನ್ನು ವ್ಯಾಖ್ಯಾನಿಸುವ ಮೂಲಕ ಇಲ್ಲಿ ವೈದೇಹಿ ಪುರಾಣ ಪ್ರತಿಮೆಗೆ ಎದುರು ಪ್ರತಿಮೆಯೊಂದನ್ನು ನಿಲ್ಲಿಸುತ್ತಾರೆ.

**ವೀಣಾ ಶಾಂತೇಶ್ವರ ಅವರ ನಿರಾಕರಣೆ**

ಪುರಾಣ ಕಥೆಗಳ ಪಾತ್ರಗಳನ್ನು ಆಧುನಿಕ ನೆಲೆಯಲ್ಲಿ ಪುನರ್ ನಿರ್ಮಿಸುವ ಕಾರ್ಯ ಇತ್ತೀಚೇಗೆ ನಡೆಯುತ್ತಲೇ ಇದೆ. ನಿರಾಕರಣೆ ಕಥೆಯು ಪೌರಾಣಿಕ ಶಕುಂತಲೆಯನ್ನು ಸ್ತ್ರೀವಾದಿ ನೆಲೆಯಲ್ಲಿ ವಿಮರ್ಶಿಸಿ ಶಕುಂತಲೆಯ ಪಾತ್ರಕ್ಕೆ ನ್ಯಾಯ ಒದಗಿಸುವ ರೀತಿಯಲ್ಲಿ ವೀಣಾ ಅವರು ವಿನ್ಯಾಸಗೊಳಿಸಿದ್ದಾರೆ. ಮಹಾರಾಜ ದುಷ್ಯಂತರ ಕಾಡಿನಲ್ಲಿಯ ಮೊಗ್ಗಾಗಿದ್ದ ಶಕುಂತಲೆಯ ಮುಗ್ಧ ಜೀವನದಲ್ಲಿ ಪ್ರವೇಶಿಸಿ ಪ್ರೀತಿಯ ಮೊದಲ ಪಾಠ ಕಲಿಸಿದ ಪುರುಷ ತನಗೆ ಅರಿವಿಲ್ಲದಂತೆ ತನ್ನಲ್ಲಿ ಸುಪ್ತವಾಗಿದ್ದ ಹೆಣ್ತನದ ಅಪಾರ ಆಸೆ–ಆಕಾಂಕ್ಷೆಗಳನ್ನು ಪ್ರಚೋಧಿಸಿ ಅರಳಿಸಿದಾತ. ತನ್ನ ಬಿಸಿಯಪ್ಪುಗೆಯಲ್ಲಿ ಜಗವನ್ನು ಮರೆಸಿದಾತ. ಜೀವನ ಒಂದು ಸುಂದರ ಕನಸು ಎಂದು ನಂಬಿಸಿದಾತ ಕ್ಷಣದಲ್ಲಿ ತನ್ನ ಸರ್ವಸ್ವವನ್ನು ಆತನ ಪದತಲದಲ್ಲಿ ಅರ್ಪಿಸುವ ಹಾಗೆ ಮೋಡಿ

ಮಾಡಿ ಆಕೆಯ ಒಡಲಲ್ಲಿ ತನ್ನ ವಂಶದ ಕುಡಿಹೊತ್ತಿ ಈಕೆ ಯಾರೋ ಗೊತ್ತಿಲ್ಲ ಎಂದು ಕೈಜಾಡಿಸಿಬಿಟ್ಟ ಪುರುಷೋತ್ತಮ. ಮುನಿಯ ಶಾಪದಂಥಹ ಬಾಹ್ಯಾಕಾರಣಗಳಿಂದ ಉಂಗುರವು ಕಳೆದುಹೋಯಿತೆಂಬ ಕ್ಷುಲ್ಲಕ ನೆಪದಿಂದ ಒಬ್ಬ ಗಂಡಸು ತಾನು ಪ್ರೀತಿಸಿದ ಹೆಣ್ಣನ್ನು ಇವಳು ಯಾರೆಂದು ಗೊತ್ತಿಲ್ಲವೆಂದು ನಿರಾಕರಿಸುವ ಪುರುಷೋತ್ತಮ ದುಷ್ಯಂತ. ಕೆಲವು ವರ್ಷಗಳ ನಂತರ ತಾನು ಬುದ್ಧಿಮಾಂದ್ಯಕ್ಕೊಳಗಾಗಿ ತಿರಸ್ಕರಿಸಿದ್ದ ಎಂದು ಕ್ಷಮೆಯಾಚಿಸಿ ಶಕುಂತಲೆಯನ್ನು ಕರೆಯಲು ಬರುವನು. ಅವಳು ತನ್ನ ಮಗನ ಶ್ರೇಯಸ್ಸಿಗಾಗಿ ಬರುವಳು.

ದುರ್ವಾಸ ಮುನಿಗಳ ಶಾಪದಿಂದ ಉಂಗುರವು ಕಳೆದುಹೋಗಿ ತನ್ನ ಬುದ್ಧಿಗೆ ಮಾಂದ್ಯವುಂಟಾಗಿ ಇಷ್ಟೆಲ್ಲ ಅನಾಹುತವಾಯಿತೆಂದು ತನ್ನನ್ನು ಕ್ಷಮಿಸಬೇಕು ಎಂದು ಗೋಗರೆದ ದುಷ್ಯಂತನನ್ನು ಮಗ ಭರತನ ಭವಿಷ್ಯಕ್ಕಾಗಿ ಕ್ಷಮಿಸಿದ ಶಕುಂತಲೆ ಅವನೊಡನೆ ಅರಮನೆ ಸೇರುತ್ತಾಳೆ.

ಆದರೆ ಅವನನ್ನು ಕೂಡುವ ಸಮಯ ಬಂದಾಗ ಅವಳ ಆತ್ಮಸಮ್ಮಾನ ಜಾಗೃತವಾಗುತ್ತದೆ. ಗೊಡ್ಡು ಸಂಪ್ರದಾಯಗಳ ರೀತಿ–ನೀತಿಗಳ ಎಲ್ಲ ಬಗೆಯ ಸಂಕೋಲೆಗಳನ್ನು ಕಿತ್ತೊಗೆದು ತನ್ನ ಆತ್ಮಸಾಕ್ಷಿಗೆ ಮಾತ್ರ ನಿಷ್ಠಳಾಗಿ ನಡೆಯುವ ನಿರ್ಧಾರಕ್ಕೆ ಶಕುಂತಲೆ ಬರುತ್ತಾಳೆ. ಆಕೆಯ ಮುಖದ ಮೇಲೆ ವಿಷಾದದ ಮುಗುಳ್ನಗೆ ಮೂಡಿ ಪುರುಷನಿಗೆ ತಾನು ಮಾಡಿದ ತಪ್ಪಿನಿಂದ ಸುಲಭವಾಗಿ ತಪ್ಪಿಸಿಕೊಳ್ಳಲು ನೂರು ದಾರಿಗಳಿವೆ. ತಮ್ಮ ಅನುಚಿತ ವರ್ತನೆಯಿಂದ ಬೇರೆಯವರಿಗೆ ಆಗುವ ನೋವಿನ ಹೊಣೆಯಿಂದ ತಪ್ಪಿಸಿಕೊಳ್ಳಲು ಆತನಿಗೆ ಹಲವು ಮಾರ್ಗಗಳಿವೆ. ಅದಕ್ಕೆ ಸಮಾಜದ ಬೆಂಬಲವೂ ಇದೆ. ಆದ್ದರಿಂದ ಆತನೂ ಲಜ್ಜಿತನಾಗುವುದಿಲ್ಲ. ಮುನಿಗಳ ಶಾಪ ಉಂಗುರ ಕಳೆದು ಹೋದ ಕ್ಷುಲ್ಲಕ ನೆಪದಿಂದ ಒಬ್ಬ ಗಂಡಸು ಪ್ರೀತಿಸಿದ, ಕೂಡಿದ, ಫಲಿಸಿದ ಹೆಣ್ಣನ್ನು ದೂರ ಮಾಡುವುದಾದರೆ ಆ ಪ್ರೀತಿಗೆ ಅರ್ಥವಿಲ್ಲ ಅಂಥವನನ್ನು ಕೂಡಲು ನನ್ನ ಆತ್ಮ ಒಪ್ಪುವುದಿಲ್ಲ. ಹೆಣ್ಣಾಗಿ ನಾನು ಆತ್ಮಸಾಕ್ಷಿಗೆ ವಿರುದ್ಧವಾಗಿ ವರ್ತಿಸಲಾರೆ ಎನ್ನುವ ಶಕುಂತಲೆಯ ಪುರುಷನ ಸಮಯ ಸಾಧಕತನ, ಕುಂಟುನೆಪ, ಅಂತಸ್ತಿನ ದರ್ಪದಿಂದ ಎಲ್ಲವನ್ನು ಕೈವಶ ಮಾಡಿಕೊಳ್ಳಬಲ್ಲೆನೆಂಬ ಅಹಂಭಾವದ ವ್ಯಕ್ತಿಯು ಕೇವಲ ಪೌರಾಣಿಕ ದುಷ್ಯಂತನಿಗೆ ಮಾತ್ರ ಅನ್ವಯವಾಗುವುದಿಲ್ಲ ಅದು ಸಮಕಾಲೀನ ಸಂದರ್ಭದಲ್ಲೂ ಪ್ರಸ್ತುತವೆನ್ನಿಸಬಹುದಾದ ಪುರುಷ ಪಾತ್ರದ ವಿನ್ಯಾಸವಾಗುತ್ತದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಅಶೋಕ ಟಿ.ಪಿ. (2013). *ವೈದೇಹಿ ಕಥನ.* ಅಕ್ಷರ ಪ್ರಕಾಶನ.
- ನಾಗರಾಜ ಹೊಸೂರಕರ್. (2021). *ವೀಣಾ ಶಾಂತೇಶ್ವರ ಅವರ ನಿರಾಕರಣೆ ಕಥೆಯಲ್ಲಿ ಮಹಿಳಾ ಪ್ರತಿಭಟನೆಯ ಸ್ವರೂಪ.* In ಅರುಣಕುಮಾರಿ ಬಿ.ಎನ್. (ಸಂ.). ಕನ್ನಡ ಮಹಿಳಾ ಸಾಹಿತ್ಯ ತಾತ್ವಿಕತೆ. ಸುವ್ವಿ ಪಬ್ಲಿಕೇಷನ್. 124–132
- ಸಂಧ್ಯಾರಾಣಿ. *ದುಷ್ಯಂತನೆಂಬ ಭ್ರಮರದ ತೋಳಲ್ಲಿ.* ಅವಧಿ. https://avadhimag.in/
- ವೈದೇಹಿ. (2006). *ವೈದೇಹಿ ಅವರ ಆಯ್ದ ಕಥೆಗಳು.* ಅಕ್ಷರ ಪ್ರಕಾಶನ.
- ವೈದೇಹಿ. (2006). *ವೈದೇಹಿ ಕಥಾಗುಚ್ಛ ಆಯ್ದ 25 ಕತೆಗಳು.* ಅಕ್ಷರ ಪ್ರಕಾಶನ.
- ವೀಣಾ ಶಾಂತೇಶ್ವರ. (2010). *ನಡೆದದ್ದೇ ಹಾದಿ (ಸಮಗ್ರ ಕಥನ ಸಾಹಿತ್ಯ).* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.